# ರಾಮಕೃಷ್ಣ ಸುದ್ದಿ ಸಂಚಯ

ESTD : 1994

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com Email : ho@ramakrishnacredit.com

GROWTH DRIVEN BY PERFORMANCE 25 1994-2019

ಸಂಪುಟ : IV ಸಂಚಿಕೆ : 4 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಜನವರಿ–ಮಾರ್ಚ್ 2019




ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

## ಅಧ್ಯಕ್ಷರ ಮಾತು

# ಕೃತಜ್ಞತೆಗಳು

**2018–19ನೇ ಸಾಲಿನಲ್ಲಿ ಒಟ್ಟು ವ್ಯವಹಾರದಲ್ಲಿ ಸಾರ್ವಕಾಲಿಕ ಹೆಚ್ಚಳದೊಂದಿಗೆ**

## 'ಉಜ್ವಲ ಪ್ರಗತಿ' ಸಾಧನೆ

ದಿನಾಂಕ 31.03.2019ಕ್ಕೆ ಅಂತ್ಯಗೊಂಡ 2018–19 ಸಾಲಿನಲ್ಲಿ ಹಿಂದಿನ ವರ್ಷದಂತೆ ಒಟ್ಟು ವ್ಯವಹಾರದಲ್ಲಿ ಸಾರ್ವಕಾಲಿಕ ಹೆಚ್ಚಳವನ್ನು ದಾಖಲಿಸಿಕೊಂಡು ಎಲ್ಲಾ ಕಾರ್ಯವಿಭಾಗದಲ್ಲಿ ಗುರಿ ಮೀರಿದ **"ಉಜ್ವಲ ಪ್ರಗತಿ"**ಯನ್ನು ದಾಖಲಿಸಿ, ನಮ್ಮ ಸಂಘದ ಸದಸ್ಯ ಗ್ರಾಹಕರಿಗೆ **"ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿ ಲಿ. ಒಂದು ಹೆಸರು ಮಾತ್ರವಲ್ಲ ಅದೊಂದು ಭರವಸೆ"**ಯಾಗಿ ಮೂಡಿಬಂದಿದೆ ಎಂದು ಹೇಳಲು ಹೆಮ್ಮೆಪಡುತ್ತೇವೆ.

2019–20ನೇ ಸಂಘದ ಸ್ಥಾಪನೆಯ 25ನೇ ವರ್ಷ. ಬೆಳ್ಳಿ ಹಬ್ಬ ಸಂಭ್ರಮಾಚರಣೆಯ ಸಮಯ. ಸ್ಥಾಪನೆಯ ಈ 25 ವರ್ಷಗಳಲ್ಲಿ ಸಂಘವು ಸಾಧಿಸಿರುವ ಪ್ರಗತಿ ನಾವೆಲ್ಲರೂ ಹೆಮ್ಮೆಪಡುವಂತದ್ದು. 31.03.2019ಕ್ಕೆ ಅಂತ್ಯಗೊಂಡ 2018–19ನೇ ಸಾಲಿನ ಪ್ರಗತಿ ಮತ್ತು ಸಂಘವು 2015ರಿಂದ 2019ರ ನಾಲ್ಕು ವರ್ಷದ ಅವಧಿಯಲ್ಲಿ ಸಾಧಿಸಿದ ಪ್ರಗತಿ ಮತ್ತು 31.03.2020ರ ಅವಧಿಗೆ ಹಮ್ಮಿಕೊಂಡಂತಹ ಕಾರ್ಯಯೋಜನೆಗಳ ಸಫಲೀಕರಣದತ್ತ ಸಂಘವು ದಾಪುಗಾಲನ್ನು ಇಟ್ಟಿರುವುದನ್ನು ತಮಗೆ ತಿಳಿಸಲು ಅತ್ಯಂತ ಸಂತೋಷಪಡುತ್ತೇವೆ.

**31.03.2019ಕ್ಕೆ ಅಂತ್ಯವಾದ 2018–19 ಸಾಲಿನಲ್ಲಿ ಸಂಘದ ಪ್ರಗತಿ ಸಾಧನೆಯ ಅಂಕಿ ಅಂಶ ಈ ಕೆಳಗಿನಂತಿದೆ.**

(ಅಂಕಿ ಅಂಶಗಳು ಲೆಕ್ಕಪರಿಶೋಧನೆಗೆ ಒಳಪಟ್ಟು) (ರೂ. ಗಳಲ್ಲಿ)

| ಕ್ರ. ಸಂ. | ಕಾರ್ಯ ವಿಭಾಗ | ಹಿಂದಿನ ಸಾಲು 2017–18 | ಪ್ರಸ್ತುತ ಸಾಲು 2018–19 | | 2017–18 ಸಾಲಿನಿಂದ ಹೆಚ್ಚಳ | ಹಿಂದಿನ ಸಾಲಿಗೆ ಹೋಲಿಸಿದಾಗ ಶೇಕಡಾವಾರು ಪ್ರಗತಿ |
|---|---|---|---|---|---|---|
| | | 31.03.2018ಕ್ಕೆ ಇದ್ದಂತೆ | 31.03.2019 ಗುರಿ | 31.03.2019 ನೈಜ | | |
| 1 | ಠೇವಣಾತಿಗಳು | 160ಕೋಟಿ | 179ಕೋಟಿ | 193ಕೋಟಿ | 33ಕೋಟಿ | 21% |
| 2 | ಸಾಲ ಮತ್ತು ಮುಂಗಡ | 128ಕೋಟಿ | 145ಕೋಟಿ | 159ಕೋಟಿ | 31ಕೋಟಿ | 24% |
| 3 | ಒಟ್ಟು ವ್ಯವಹಾರ (ಠೇವಣಿ+ಸಾಲ) | 288ಕೋಟಿ | 324ಕೋಟಿ | 352ಕೋಟಿ | 64ಕೋಟಿ | 22% |
| 4 | ನಿವ್ವಳ ಲಾಭ | 4.71ಕೋಟಿ | 4.80ಕೋಟಿ | 5.77ಕೋಟಿ | 1.06ಕೋಟಿ | 22% |
| 5 | <u>ಅನುತ್ಪಾದಕ ಆಸ್ತಿ</u> | | | | | |
| | ಮೊಬಲಗು | 15ಲಕ್ಷ | 15ಲಕ್ಷ | 15ಲಕ್ಷ | | |
| | ಶೇಕಡ | 0.12% | 0.12% | 0.10% | | |
| | ನಿವ್ವಳ ಅನುತ್ಪಾದಕ ಆಸ್ತಿ | Nil | Nil | Nil | | |
| 6 | ಒಟ್ಟು ವಹಿವಾಟು | 1046ಕೋಟಿ | – | 1292ಕೋಟಿ | 246ಕೋಟಿ | 24% |

ಸಂಘದ ಈ ಸಾರ್ವಕಾಲಿಕ ಪ್ರಗತಿ ಸಾಧನೆಗೆ ಸದಸ್ಯ ಬಾಂಧವರಾದ ತಾವು ಸಂಘದ ಮೇಲಿಟ್ಟ ನಂಬಿಕೆ, ನೀಡಿದ ಸಹಕಾರವೇ ಕಾರಣ. ತಮಗೆ ಸಂಘದ ವತಿಯಿಂದ ಹಾಗೂ ನನ್ನ ವೈಯಕ್ತಿಕ ನೆಲೆಯಲ್ಲಿ ಹೃತ್ಪೂರ್ವಕ ಕೃತಜ್ಞತೆಗಳು.

ಪ್ರಸ್ತುತ ಆಡಳಿತ ಮಂಡಳಿ 01.04.2015ರಿಂದ ಅಧಿಕಾರ ವಹಿಸಿಕೊಂಡು ಈ ನಾಲ್ಕು ವರ್ಷಗಳಲ್ಲಿ ಸಂಘವು ಸಾಧಿಸಿರುವ ಪ್ರಗತಿಯ ಪಕ್ಷಿನೋಟ ಹಾಗೂ 2015ರಿಂದ 2020ರ ಅವಧಿಗೆ ಹಮ್ಮಿಕೊಂಡ ಕಾರ್ಯಯೋಜನೆಗಳನ್ನು ಸಾಧಿಸುವ ನಿಟ್ಟಿನಲ್ಲಿ ಆಗಿರುವ ಪ್ರಗತಿಯ ವಿವರಗಳು ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

| ವರ್ಷ | ಸದಸ್ಯರ ಸಂಖ್ಯೆ | ಪಾಲು ಬಂಡವಾಳ | ಠೇವಣಿ | ಸಾಲಗಳು | ದುಡಿಯುವ ಬಂಡವಾಳ | ನಿವ್ವಳ ಲಾಭ | ಡಿವಿಡೆಂಟ್ | ಅನುತ್ಪಾದಕ ಆಸ್ತಿ Gross | ಶಾಖೆ |
|---|---|---|---|---|---|---|---|---|---|
| 31.03.2015 | 43976 | 344 | 11832 | 8639 | 13441 | 281 | 20% | 0.13% | 16 |
| 31.03.2016 | 47672 | 440 | 12709 | 9481 | 14624 | 385 | 22% | 0.15% | 16 |
| 31.03.2017 | 51377 | 544 | 13355 | 10754 | 15683 | 403 | 23% | 0.15% | 18 |
| 31.03.2018 | 55756 | 631 | 16000 | 12843 | 18727 | 471 | 23% | 0.12% | 18 |
| 31.03.2019 | 60603 | 670 | 19351 | 15884 | 22445 | 577 | ಮಹಾಸಭೆಯ ನಿರ್ಣಯದಂತೆ | 0.10% | 20 |

**2018–19ನೇ ಸಾಲಿನಾಂತ್ಯ 31.03.2019ರ ಅಂಕಿ ಅಂಶಗಳನ್ನು 2014–15 ನೇ ಸಾಲಿನಾಂತ್ಯ 31.03.2015ಕ್ಕೆ ಹೋಲಿಸಿದಾಗ,**

1) ಸದಸ್ಯರು 16627 ಹೆಚ್ಚಾಗಿ, ಸದಸ್ಯತನದಲ್ಲಿ ಶೇ.38ರಷ್ಟು ವೃದ್ಧಿಯಾಗಿರುವುದು.
2) ಪಾಲು ಬಂಡವಾಳ ₹3.26 ಕೋಟಿಯಷ್ಟು ಹೆಚ್ಚಾಗಿ ಶೇ.95ರಷ್ಟು ವೃದ್ಧಿ ದಾಖಲಿಸಿರುವುದು.
3) ಠೇವಣಿಯು ₹75.19 ಕೋಟಿಯಷ್ಟು ಹೆಚ್ಚಾಗಿ ಶೇ.64ರಷ್ಟು ವೃದ್ಧಿ ದಾಖಲಿಸಿರುವುದು.
4) ಸಾಲ ಮತ್ತು ಮುಂಗಡ ₹72.47 ಕೋಟಿ ಹೆಚ್ಚಾಗಿ, ಶೇ.84ರಷ್ಟು ವೃದ್ಧಿಯಾಗಿರುವುದು.
5) ದುಡಿಯುವ ಬಂಡವಾಳವು ₹90.04 ಕೋಟಿ ಹೆಚ್ಚಾಗಿ, ಶೇ.67ರಷ್ಟು ವೃದ್ಧಿಯಾಗಿ ರುವುದು.
6) ದಿನಾಂಕ 31.03.2015ರಲ್ಲಿ ಶೇ.0.13ರಷ್ಟಿದ್ದ ಅನುತ್ಪಾದಕ ಆಸ್ತಿಯು ಶೇ.0.03ರಷ್ಟು ಕಡಿಮೆಯಾಗಿ ದಿನಾಂಕ 31.03.2019ಕ್ಕೆ ಶೇ.0.10ಕ್ಕೆ ಸೀಮಿತವಾಗಿರುವುದು ಹಾಗೂ ನಿವ್ವಳ ಅನುತ್ಪಾದಕ ಆಸ್ತಿ ಶೂನ್ಯ ಪ್ರಮಾಣದಲ್ಲಿರುವುದು.
7) 31.03.2015 ರಿಂದ 31.03.2019ರ ಅವಧಿಯಲ್ಲಿ ನಿವ್ವಳ ಲಾಭವು ₹2.90 ಕೋಟಿ ಹೆಚ್ಚಾಗಿ, ಶೇ.96ರಷ್ಟು ವೃದ್ಧಿಯಾಗಿರುವುದು.
8) 2014–15ನೇ ಸಾಲಿನಲ್ಲಿ ಡಿವಿಡೆಂಟ್ ಶೇ.20 ನೀಡಿದ್ದು, 2017–18ನೇ ಸಾಲಿಗೆ ಶೇ.23ರಷ್ಟು ನೀಡಲಾಗಿದೆ.
9) 2014–15ರಲ್ಲಿ 16 ಶಾಖೆಗಳಿದ್ದು, 4 ಹೊಸ ಶಾಖೆಗಳನ್ನು ತೆರೆಯಲಾಗಿದ್ದು 31.03.2019ಕ್ಕೆ ಸಂಘವು 20 ಶಾಖೆಗಳನ್ನು ಹೊಂದಿದೆ.
10) ಸಂಘದ ಕೇಂದ್ರ ಕಛೇರಿಗಾಗಿ ನಿವೇಶನವನ್ನು ಖರೀದಿಸಲಾಗಿರುವುದು.
11) ತಮ್ಮೆಲ್ಲರ ಸಹಕಾರದಿಂದ ಈ ಅವಧಿಯಲ್ಲಿ ಸಂಘವು ನಿರಂತರ ಪ್ರಗತಿಯನ್ನು ಕ್ಯಾದುಕೊಂಡು ಬಂದಿದ್ದು, ರಾಜ್ಯದ ಅತ್ಯುತ್ತಮ ಕ್ರೆಡಿಟ್ ಸಹಕಾರ ಸಂಘಗಳಲ್ಲಿ ಒಂದಾಗಿ ಗುರುತಿಸಿಕೊಂಡು ರಾಜ್ಯ ಸರ್ಕಾರದ, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಗೌರವ ಪ್ರಶಸ್ತಿಗಳಿಗೆ ಪಾತ್ರವಾಗಿದೆ.

**2015ರಿಂದ 2020ರ ಅವಧಿಯ ಗುರಿ ಕಾರ್ಯಯೋಜನೆಗಳ ಬಗ್ಗೆ**

01.04.2015ಕ್ಕೆ ನಾನು ಸಂಘದ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡಾಗ 2015ರಿಂದ 2020ರ ವರೆಗಿನ ಮುಂದಿನ 5 ವರ್ಷಗಳ ಅವಧಿಯಲ್ಲಿ ಸಂಘವು ಸಾಧಿಸಬೇಕಾದ ನಿರ್ದಿಷ್ಟ ಕಾರ್ಯಯೋಜನೆ ಗುರಿಗಳನ್ನು ಇಟ್ಟುಕೊಂಡಿದ್ದು 31.03.2020ಕ್ಕೆ ಒಟ್ಟು ವ್ಯವಹಾರವನ್ನು ರೂ.400 ಕೋಟಿ ತಲುಪಿಸುವುದು, ಈ ನಿಟ್ಟಿನಲ್ಲಿ ಪ್ರಗತಿಯನ್ನು ಸಾಧಿಸಿದ್ದು 31.03.2019ಕ್ಕೆ ಒಟ್ಟು ವ್ಯವಹಾರವು ರೂ.352 ಕೋಟಿ ವ್ಯವಹಾರವನ್ನು ತಲುಪಿರುವುದು.

ತಮ್ಮೆಲ್ಲರ ಸಹಕಾರರಿಂದ, 2015–2020ರ ಐದು ವರ್ಷದ ಅವಧಿಯಲ್ಲಿ ಸಾಧಿಸಲು ಉದ್ದೇಶಿಸಿದ ಗುರಿ ಕಾರ್ಯಯೋಜನೆಗಳನ್ನು, ಸಾಧಿಸುವ ನಿಟ್ಟಿನಲ್ಲಿ ದೃಢ ಹೆಜ್ಜೆಯನ್ನಿಟ್ಟಿದ್ದು ಠೇವಣಾತಿ, ಸಾಲ, ಒಟ್ಟು ವ್ಯವಹಾರ, ಅನುತ್ಪಾದಕ ಆಸ್ತಿ, ಶಾಖೆ ಸೇರಿದಂತೆ ಎಲ್ಲಾ ಕಾರ್ಯವಿಭಾಗಗಳಲ್ಲಿ ಇನ್ನಷ್ಟು ವ್ಯವಹಾರಾಭಿವೃದ್ಧಿಯನ್ನು ಮಾಡಿ ದಿನಾಂಕ 31.03.2020ರೊಳಗೆ ಉದ್ದೇಶಿತ ಎಲ್ಲಾ ಗುರಿಗಳ ಕಾರ್ಯಯೋಜನೆಗಳನ್ನು ಸಾಧಿಸುವ ಭರವಸೆ ನಮಗಿದೆ.

ಸಂಘದ ವ್ಯವಹಾರದಲ್ಲಿ ಸಾರ್ವಕಾಲಿಕ ಹೆಚ್ಚಳ, ಎಲ್ಲಾ ಕಾರ್ಯವಿಭಾಗಗಳಲ್ಲಿ ಗುರಿ ಮೀರಿದ ಸಾಧನೆ, ಈ ಉಜ್ವಲ ಪ್ರಗತಿಗೆ ಸಹಕರಿಸಿದ ಸಂಘದ ಎಲ್ಲಾ ನಿರ್ದೇಶಕರುಗಳಿಗೂ, ಶಾಖಾ ಸಲಹಾ ಸಮಿತಿಯ ಅಧ್ಯಕ್ಷರಿಗೂ ಹಾಗೂ ಶಾಖಾ ಸಲಹಾ ಸಮಿತಿಯ ಎಲ್ಲಾ ಸದಸ್ಯರಿಗೂ ಮತ್ತು ಗ್ರಾಹಕ ಸದಸ್ಯರುಗಳಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.

# ಎಸ್‌ಸಿಡಿಸಿಸಿ ಬ್ಯಾಂಕಿನ ನಿರ್ದೇಶಕರಾಗಿ ಆಯ್ಕೆಯಾದ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರಿಗೆ ಹೃತ್ಪೂರ್ವಕ ಅಭಿನಂದನೆಗಳು



ಎಸ್‌ಸಿಡಿಸಿಸಿ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ಬಹುಮತದಿಂದ ನಿರ್ದೇಶಕರಾಗಿ ಆಯ್ಕೆಯಾದ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರನ್ನು ಸಂಘದ ಆಡಳಿತ ಮಂಡಳಿ ಸಭೆ ದಿನಾಂಕ 30.03.2019ರಂದು ನಿರ್ದೇಶಕರು ಅಭಿನಂದಿಸಿದರು.



ದಿನಾಂಕ 03.04.2019ರಂದು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು, ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ ನೀಡಿದಾಗ ಧರ್ಮಾಧಿಕಾರಿ ಡಾ| ವೀರೇಂದ್ರ ಹೆಗಡೆಯವರು ಅಭಿನಂದಿಸಿದರು. ಈ ಸಂದರ್ಭದಲ್ಲಿ ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷ ಡಾ| ಎಂ.ಎನ್. ರಾಜೇಂದ್ರ ಕುಮಾರ್‌ರವರು ಉಪಸ್ಥಿತರಿದ್ದರು

# ಶಾಖಾ ಸಮಾರಂಭಗಳು




ದಿನಾಂಕ 21.02.2019ರಂದು ಜರಗಿದ ಸಂಘದ 20ನೇ ಶಾಖೆ ಹಂಪನಕಟ್ಟೆ ಶಾಖೆಯ 'ಶಾಖಾ ಪರಿಚಯ' ಕಾರ್ಯಕ್ರಮ



ದಿನಾಂಕ 06.04.2019 ರಂದು ಸಂಘದ 19ನೇ ಶಾಖೆ ಕಡಬ ಶಾಖೆಯ 'ನೂತನ ಕಛೇರಿಯ ಉದ್ಘಾಟನಾ' ಕಾರ್ಯಕ್ರಮ



ಹೊಸದಾಗಿ ಅಧಿಕಾರ ವಹಿಸಿದ ಡಾ| ಸುರೇಶ್ ಗೌಡ ಕೆಸಿಎಸ್, ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ಇವರನ್ನು ಸಂಘದ ಅಧ್ಯಕ್ಷರು ದಿನಾಂಕ 06.03.2019ರಂದು ಭೇಟಿ ನೀಡಿ ಅಭಿನಂದಿಸಿದರು

## ಸಹ್ಯಾದ್ರಿ ವಿಝ್ ಕ್ವಿಜ್ (Sahyadri Whiz Quiz) ಕಾರ್ಯಕ್ರಮಕ್ಕೆ ಸಂಘದ ಪ್ರಾಯೋಜಕತ್ವ




ದಿನಾಂಕ 08.03.2019ರಂದು ಜರಗಿದ ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಆಂಡ್ ಮೇನೇಜ್‌ಮೆಂಟ್, ಅಡ್ಯಾರ್ ಇವರು ಜರಗಿಸಿದ ಸಹ್ಯಾದ್ರಿ ವಿಝ್‌ಕ್ವಿಜ್ (Sahyadri Whiz Quiz) ಕಾರ್ಯಕ್ರಮದ ಪ್ರಥಮ ಬಹುಮಾನವನ್ನು ಸಂಘವು ಪ್ರಾಯೋಜಿಸಿತ್ತು ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಘದ ಅಧ್ಯಕ್ಷರು ಭಾಗವಹಿಸಿದರು.

## ದಿನಾಂಕ 07.03.2019ರಂದು ಜರಗಿದ ಶಾಖಾಧಿಕಾರಿಗಳ ಸಮಾವೇಶ



ದಿನಾಂಕ 07.03.2019ರಂದು ಸಂಘದ ಕೇಂದ್ರ ಕಛೇರಿಯಲ್ಲಿ ಶಾಖಾ ವ್ಯವಸ್ಥಾಪಕರ ಪ್ರಗತಿ ಪರಿಶೀಲನಾ ಸಭೆಯನ್ನು ಜರಗಿಸಲಾಯಿತು. ಸಭೆಯನ್ನು ಉದ್ಘಾಟಿಸಿದ ಸಂಘದ ಅಧ್ಯಕ್ಷರಾದ ಶ್ರೀ ಕೆ.ಜೈರಾಜ್ ಬಿ. ರೈಯವರು ವೈಯಕ್ತಿಕ ಶಾಖೆಗಳ ಪ್ರಗತಿ ಪರಿಶೀಲನೆ ನಡೆಸುವ ಸಂದರ್ಭದಲ್ಲಿ ಶಾಖೆಗಳು 2018–19ನೇ ಸಾಲಿನ ವರ್ಷಾಂತ್ಯ 31.03.2019ಕ್ಕೆ ಸಾಧಿಸಬೇಕಾದ ನಿರೀಕ್ಷಿತ ಗುರಿಗಳ ಬಗ್ಗೆ ತಿಳಿಸಿ, ಶಾಖಾಧಿಕಾರಿಗೆ ಸಲಹೆ ಸೂಚನೆ ಮಾರ್ಗದರ್ಶನಗಳನ್ನು ನೀಡಿ ಈ ನಿರೀಕ್ಷಿತ ಗುರಿಗಳನ್ನು ತಪ್ಪದೇ ಸಾಧಿಸುವಂತೆ ಸೂಚಿಸಿದರು.

ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿ ಜಯಪಾಲ ಶೆಟ್ಟಿ, ನಿರ್ದೇಶಕರುಗಳಾದ ಶ್ರೀ ಕೆ. ಸೀತಾರಾಮ ರೈ ಸವಣೂರು, ಶ್ರೀ ಪಿ.ಎಸ್. ಅಡ್ಯಂತಾಯ, ಶ್ರೀ ವಿ.ಪಿ.ಶೆಟ್ಟಿ, ಶ್ರೀ ಯಂ.ರಾಮಯ ಶೆಟ್ಟಿ ಮತ್ತು ಶ್ರೀ ಕುಂಬ್ರ ದಯಾಕರ ಆಳ್ವರವರು ಸಭೆಯಲ್ಲಿ ಭಾಗವಹಿಸಿ ಶಾಖಾಧಿಕಾರಿಗಳಿಗೆ ಸೂಕ್ತ ಸಲಹೆಗಳನ್ನು ನೀಡಿದರು.

### ಶುಭವಿವಾಹ

★ ಸಂಘದ ಮಂಗಳೂರು ಶಾಖೆಯ ಸಿಬ್ಬಂದಿ ಚಿ|ಸೌ| ದೀಪಿಕಾ ರವರ ವಿವಾಹವು ಚಿ| ಪ್ರಸಾದ್‌ರವರೊಂದಿಗೆ ಇತ್ತೀಚೆಗೆ ಜರಗಿತು. ವೈವಾಹಿಕ ಜೀವನಕ್ಕೆ ಕಾಲಿಟ್ಟ ನವ ವಧೂ–ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.

### ಶ್ರದ್ಧಾಂಜಲಿ

★ ಇತ್ತೀಚೆಗೆ ನಿಧನರಾದ, ಸಂಘದ ಕಾರ್ಕಳ ಶಾಖೆಯ ಪಿಗ್ಮಿ ಸಂಗ್ರಾಹಕ ಶ್ರೀ ಜಯಪ್ರಸಾದ್ ಎಸ್. ರಾವ್,

★ ಶ್ರೀಮತಿ ಗಿರಿಜ ಎನ್. ಶೆಟ್ಟಿ (ಮಂಗಳೂರು ಶಾಖೆಯ ಪಿಗ್ಮಿ ಸಂಗ್ರಾಹಕರಾದ ಶ್ರೀ ಗೋಪಿನಾಥ್ ಶೆಟ್ಟಿಯವರ ತಾಯಿ),

★ ಶ್ರೀಮತಿ ಸಂಜೀವಿ ವಿ. ರೈ (ವಿಟ್ಲ ಶಾಖಾಧಿಕಾರಿ ಶ್ರೀ ಬಾಲಕೃಷ್ಣ ರೈಯವರ ತಾಯಿ)

★ ಶ್ರೀಮತಿ ಪ್ರೇಮಾ ಜೆ. ಶೆಟ್ಟಿ (ಕಾರ್ಕಳ ಶಾಖಾಧಿಕಾರಿ ಶ್ರೀ ವಿರಾಜ್ ಜೆ. ಶೆಟ್ಟಿಯವರ ತಾಯಿ),

ಇವರುಗಳ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ, ಅಗಲಿದ ಚೇತನಗಳಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.

### ಅಭಿನಂದನೆಗಳು

★ ಸಂಘದ ಬಿ.ಸಿ.ರೋಡ್ ಶಾಖೆಯ ಅಟೆಂಡರ್ ಶ್ರೀ ಹರೀಶ್ ಮೂಲ್ಯ ಇವರು ಹೆಣ್ಣು ಮಗುವಿನ ತಂದೆಯಾಗಿದ್ದಾರೆ ಇವರಿಗೆ ಹಾರ್ದಿಕ ಅಭಿನಂದನೆಗಳು.

★ ಸಂಘದ ಬಿ.ಸಿ.ರೋಡ್ ಶಾಖೆಯ ಕ್ಲರ್ಕ್ ಶ್ರೀ ಕುಂಞ ಇವರು ಗಂಡುಮಗುವಿನ ತಂದೆಯಾಗಿದ್ದಾರೆ ಇವರಿಗೆ ಹಾರ್ದಿಕ ಅಭಿನಂದನೆಗಳು.

### ಹುಟ್ಟು ಹಬ್ಬದ ಶುಭಾಶಯಗಳು

| ಸಿಬ್ಬಂದಿಗಳ ಹೆಸರು ಮತ್ತು ಶಾಖೆ | |
|---|---|
| ಕು. ಅಶ್ವಿತಾ ಎಂ., ಕೇಂದ್ರಕಛೇರಿ | ಶ್ರೀ ಕರುಣಾಕರ್ ಶೆಟ್ಟಿ,ಪುತ್ತೂರು |
| ಶ್ರೀಮತಿ ನಿರ್ಮಲ ಶೆಟ್ಟಿ, ಮೂಡಬಿದ್ರಿ | ಕು. ಲಾವಣ್ಯ, ಕುಂದಾಪುರ |
| ಶ್ರೀಮತಿ ದೀಪಿಕ, ಮಂಗಳೂರು | ಶ್ರೀ ಗಣೇಶ್ ಜಿ.ಕೆ., ಕೇಂದ್ರ ಕಛೇರಿ |
| ಶ್ರೀಮತಿ ತುಳಸಿ, ಉಡುಪಿ | ಶ್ರೀಮತಿ ಶ್ರೀಲತಾ ಶೆಟ್ಟಿ, ಬ್ರಹ್ಮಾವರ |
| ಕು. ಅಕ್ಷತ ಕುಮಾರಿ, ಹಂಪನಕಟ್ಟೆ | ಶ್ರೀ ಸೇಸಪ್ಪ ನ್ಯಾಕ್, ಪುತ್ತೂರು |
| ಕು. ಶ್ರುತಿ ಕೆ., ಬಿ.ಸಿ.ರೋಡ್ | ಶ್ರೀ ಕುಂಞ, ಬಿ.ಸಿ.ರೋಡ್ |
| ಶ್ರೀ ಸೂರಜ್ ಭಂಡಾರಿ, ಸುರತ್ಕಲ್ | ಶ್ರೀ ಮಹಾಬಲ ಶೆಟ್ಟಿ, ಬಿ.ಸಿ.ರೋಡ್ |
| ಶ್ರೀ ಬಾಲಕೃಷ್ಣ ರೈ, ವಿಟ್ಲ | ಶ್ರೀ ರಮೇಶ್ ಪಿ, ಸುಳ್ಯ |
| ಶ್ರೀ ಶಮಿತ್ ಕುಮಾರ್, ಮಂಗಳೂರು | ಶ್ರೀಮತಿ ಉಷಾ ಬಿ., ಉಪ್ಪಿನಂಗಡಿ |
| ಶ್ರೀ ಮೋಹನ್‌ದಾಸ್ ಶೆಟ್ಟಿ, ಕೇಂದ್ರ ಕಛೇರಿ | ಶ್ರೀ ನವೀನ್‌ಕುಮಾರ್, ಮೂಡಬಿದ್ರಿ |
| ಶ್ರೀಮತಿ ಜ್ಯೋತಿ, ಕೇಂದ್ರ ಕಛೇರಿ | ಶ್ರೀ ನಾಗರಾಜ್ ಎಚ್., ಬೈಂದೂರು |
| ಶ್ರೀ ಶ್ರೀಹರ್ಷ ಡಿಎಸ್., ಉಪ್ಪಿನಂಗಡಿ | ಶ್ರೀಮತಿ ಉಷಾ ಶೆಟ್ಟಿ, ಕೇಂದ್ರ ಕಛೇರಿ |
| ಶ್ರೀ ಅಮರ್‌ನಾಥ್ ಹೆಗ್ಡೆ, ಬೈಂದೂರು | ಶ್ರೀ ಮೋಹನ್‌ದಾಸ್ ಶೆಟ್ಟಿ, ಮಂಗಳೂರು |
| ಶ್ರೀಮತಿ ಮಿಸ್ರಿಯ ಪಿ.ಐ., ಉಪ್ಪಿನಂಗಡಿ | ಶ್ರೀ ನಾಗರಾಜ್, ಕುಂದಾಪುರ |
| ಶ್ರೀಮತಿ ಜಯಂತಿ ಖಾರ್ವಿ, ಬೈಂದೂರು | ಶ್ರೀ ಹರೀಶ್ ಮೂಲ್ಯ, ಬಿ.ಸಿ.ರೋಡ್ |
| ಶ್ರೀ ಭರತ್‌ಎಸ್., ಹೆಬ್ರಿ | ಶ್ರೀ ರಾಘವೇಂದ್ರ ರಾವ್, ಹೆಬ್ರಿ |
| ಶ್ರೀಮತಿ ಅನಿತಾ ಎ., ಮುಲ್ಕಿ | |

Private Circulation only

BOOK-POST

To,

If not delivered please return to :

**SRI RAMAKRISHNA CREDIT CO-OP. SOCIETY LTD.**

2nd Floor, Amruthotsava Building, Bunts Hostel Circle, Mangalore - 575 003.